**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.12.08.2024**

**ಮುಂದುವರಿದ ಪಾಟಿ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಬಿ ಎಂ ಬಿ ವಕೀಲರಿಂದಃ**

4. 1 ನೇ ಪ್ರತಿವಾದಿ 2 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಆ ಕಾರಣದಿಂದ ಈ ದಾವೆಯು 1 ನೇ ಪ್ರತಿವಾದಿ ವಾರಸುದಾರರ ಊರ್ಜಿತ ಆಗುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆ ಮುಖ್ಯ ರಸ್ತೆಗೆ ಬರುತ್ತದೆ ಎಂದರೆ ಸರಿ. ಡಾಂಬರ್ ರಸ್ತೆಯ ಉತ್ತರ ದಿಕ್ಕಿಗೆ ಕಾಲು ದಾರಿ ಇರುತ್ತದೆ. ಡಾಂಬರ್ ರಸ್ತೆಯ ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಮಣ್ಣಿನ ರಸ್ತೆ ಇದೆ ಎಂದರೆ ಸರಿಯಲ್ಲ. ನನಗೆ 2 ನೇ ಪ್ರತಿವಾದಿ 2002 ರಿಂದ ಗೊತ್ತಿರುತ್ತಾರೆ. 2 ನೇ ಪ್ರತಿವಾದಿ ಸುಣ್ಣದ ಕಲ್ಲು ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳ ವಿರುದ್ದ ಪುರಸಭೆಗೆ ದೂರು ಕೊಟ್ಟಿದ್ದೇನೆ ಎಂದರೆ ಸರಿ. ಸದರಿ ದೂರಿನಲ್ಲಿ 2 ನೇ ಪ್ರತಿವಾದಿ ಯ ವಿರುದ್ದ ಯಾವುದೇ ತಕರಾರು ಇರಲಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಸುಣ್ಣದ ಮೂಟೆ ಹಾಕಿದ್ದ ಬಗ್ಗೆ ಮತ್ತು ಕೊಳಚೆ ಹಾಕುತ್ತಿದ್ದ ಬಗ್ಗೆ ಸಾರ್ವಜನಿಕರು ಸಹ ದೂರು ನೀಡಿರುತ್ತಾರೆ.

5. ನಮ್ಮ ಮನೆಯ ಮುಂದೆ ಕನ್ನಡ ಪ್ರಭಾ ದಿನಪತ್ರಿಕೆಯ ವರದಿಗಾರರು ಆದ ಪಿಳ್ಳ ರಾಜು ರವರ ಕಚೇರಿ ಇದೆ ಎಂದರೆ ಸರಿ. ನಮ್ಮ ಮನೆಯ ಮುಂದೆ ಇರುವ ರಸ್ತೆಯು ಉತ್ತರ ದಿಕ್ಕಿನ ಕಡೆಗೆ ಹೋಗುತ್ತದೆ ಎಂದರೆ ಸರಿ. ನಿಪಿ-6 ರಿಂದ 22 ಪೋಟೋಟೀಗಳನ್ನು ಸೃಷ್ಟಿಮಾಡಿ ಹಾಜರು ಪಡಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಜಾಗದಲ್ಲಿ ಸುಣ್ಣದ ಕಲ್ಲು ವ್ಯಾಪಾರ ಮಾಡುತ್ತಿದ್ದು ಅವರಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಚೇಂದ್ರ ಮೂರ್ತಿ, ಮಲ್ಲಿಕಾರ್ಜುನ ಮತ್ತು ಸಿದ್ದಪ್ಪ ರವರನ್ನು ನೋಡಿರುತ್ತೇನೆ. ಸದರಿಯವರಿಗೆ ಕ್ರಯ ಪತ್ರ ಬರೆದುಕೊಡುವ ಯಾವುದೇ ಅಧಿಕಾರ ಇರಲಿಲ್ಲ ಅದನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ಸುಚೇಂದ್ರ ಮೂರ್ತಿ ರವರು ದಾವಾ ಆಸ್ತಿಯನ್ನು ನಾನು ಖರೀದಿ ಮಾಡುವ ಮೊದಲು ಅದನ್ನು ಕಾರ್ಮಿಕ ಇಲಾಖೆಗೆ ಬಾಡಿಗೆಗೆ ನೀಡಿದ್ದರು. ಸದರಿ ಬಾಡಿಗೆ ಹಣ ಈಗಲೂ ಸಹ ಸುಚೇಂದ್ರ ಮೂರ್ತಿ ರವರಿಗೆ ಹೋಗುತ್ತಿದೆ ಎಂದರೆ ಸರಿಯಲ್ಲ. ಸದರಿ ಬಾಡಿಗೆ ಹಣವನ್ನು ಕಾನೂನು ಬಾಹಿರವಾಗಿ ಸ್ವೀಕಾರ ಮಾಡುತ್ತಿದ್ದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರ್ಮಿಕ ಇಲಾಖೆಗೆ ನೀಡಿರುವ 2 ಕಟ್ಟಡಗಳು ಪ್ರ ತಿವಾದಿಗೆ ಸೇರಿದ್ದು

ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸುಳ್ಳು ದಾಖಲೆಗಳನ್ನು ಹಾಜರು ಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.08.07.2024**

## ಪಾಟಿ ಸವಾಲುಃ ವಾದಿ ಪರ ಶ್ರೀ. ಬಿ ಎಂ ಬಿ ವಕೀಲರಿಂದಃ

1. ನಾನು ಪದವಿ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ಈ ದಾವೆ ದಾಖಲಿಸಲು ನಮ್ಮ ವಕೀಲರಿಗೆ ನನ್ನ ಗಂಡ ಮಾಹಿತಿ ನೀಡಿರುತ್ತಾರೆ. ನನ್ನ ಗಂಡ 06 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಪ್ರತಿವಾದಿ 1(ಎ) ಯಿಂದ (ಡಿ) ವರೆಗೆ ನಾನು ಖುದ್ದಾಗಿ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿಯನ್ನು ನೋಡಿರುತ್ತೇನೆ. ನಮ್ಮ ಜಾಗದಲ್ಲಿ ಪ್ರತಿವಾದಿಗಳು ಸುಣ್ಣದ ಮೂಟೆ ಇಟ್ಟು ಓಡಾಡಲು ತೊಂದರೆಪಡಿಸಿದ ಕಾರಣ ಈ ದಾವೆಯನ್ನು ಹಾಕಿರುತ್ತೇನೆ. ದಾವಾ ಆಸ್ತಿಯ ಸಂಖ್ಯೆ 161/159/87/81. ಅದರ ವಿಸ್ತೀರ್ಣ 4000 ಚಿಲ್ಲರೆ ಚದರ ಅಡಿ ಇರುತ್ತದೆ. ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ನಮ್ಮದೇ ಬಿಲ್ಡಿಂಗ್, ಪಶ್ಚಿಮಕ್ಕೆ ನಮ್ಮದೇ ಖಾಲಿ ಜಾಗ, ಉತ್ತರಕ್ಕೆ ಸರೋಜಮ್ಮರವರ ಬಿಲ್ಡಿಂಗ್ ಹಾಗೂ ದಕ್ಷಿಣಕ್ಕೆ ಗೌರಮ್ಮನವರ ಆಸ್ತಿ ಇರುತ್ತದೆ. ದಾವಾ ಆಸ್ತಿಯನ್ನು ನಾವು 2002 ರಲ್ಲಿ ಖರೀದಿ ಮಾಡಿರುತ್ತೇವೆ. ನಾನು ವಾದಿಯನ್ನು ಮದುವೆಯಾಗಿ 25 ವರ್ಷಗಳು ಆಯಿತು.

2. ದಾವಾ ಆಸ್ತಿಯನ್ನು ನಾವು ಸುಚೀಂದ್ರ ಮೂರ್ತಿ, ಮಲ್ಲಿಕಾರ್ಜುನ್ ಮತ್ತು ವಾಸುದೇವ್ ಎಂಬುವವರಿಂದ ಖರೀದಿ ಮಾಡಿರುತ್ತೇವೆ. ಸದರಿ ವಿಚಾರವನ್ನು ವಾದಪತ್ರದಲ್ಲಿ ತಿಳಿಸಿರುತ್ತೇನೆ. ಸದರಿ ಕ್ರಯಪತ್ರದಲ್ಲಿ ಉಲ್ಲೇಖ ಇರುವ ಚೆಕ್ಕುಬಂದಿಯನ್ನು ವಾದ ಪತ್ರದಲ್ಲಿ ತಿಳಿಸಿರುತ್ತೇನೆ. ವಾದಿ ಪತ್ರದಲ್ಲಿ ಸುಳ್ಳು ಚೆಕ್ಕುಬಂದಿಯನ್ನು ನೀಡಿದ್ದೇವೆ ನಾವು ಹೇಳುವಂತಹ ಚೆಕ್ಕುಬಂದಿ ಅಸ್ತಿತ್ವದಲ್ಲಿ ಇಲ್ಲ

ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಸುಣ್ಣದ ಕಲ್ಲು ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ಸದರಿ ಸುಣ್ಣದ ಕಲ್ಲುಗಳನ್ನು ಅವರ ಜಾಗದಲ್ಲಿ ಇಟ್ಟು ವ್ಯಾಪಾರ ಮಾಡುತ್ತಾರೆ ಎಂದರೆ ಸಾಕ್ಷಿ ನಮ್ಮ ಜಾಗದಲ್ಲಿ ಇಟ್ಟು ಗಲಾಟೆ ಮಾಡುತ್ತಾರೆ ಎಂದು ನುಡಿಯುತ್ತಾರೆ. ಈ ವಿಚಾರವಾಗಿ ಪ್ರತಿವಾದಿಗಳ ವಿರುದ್ದ ನಾನು ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಪ್ರತಿವಾದಿಗಳು ಬಿಡುಗಡೆಯಾಗಿದ್ದಾರೆ ಎಂದರೆ ಸಾಕ್ಷಿ ನನ್ನ ಗಂಡನಿಗೆ ಅನಾರೋಗ್ಯ ಇದ್ದ ಕಾರಣ ಸಾಕ್ಷಿ ನುಡಿದಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳು ಸುಣ್ಣದ ಕಲ್ಲು ಹಾಕಿರುವ ಜಾಗದ ಪೂರ್ವಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆ 08 ಅಡಿಗಳ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಯು ಪ್ರತಿವಾದಿಗಳ ಪೂರ್ವಿಕರಾದ ಬೆಸ್ತರ ಗಂಗಪ್ಪ ತಂದೆ ಚಿಕ್ಕಮುನಿಯಪ್ಪರವರಿಗೆ ಸೇರಿತ್ತು ಎಂದರೆ ಸರಿಯಲ್ಲ. ಸದರಿ 08 ಅಡಿ ರಸ್ತೆಗೆ ಸಂಬಂಧಿಸಿದ ದಾಖಲಾತಿಗಳನ್ನು ನಾನು ನೋಡಿರುತ್ತೇನೆ.

3. ಸದರಿ 08 ಅಡಿ ರಸ್ತೆಯು ಪುರಸಭಾ ದಾಖಲೆಗಳಲ್ಲಿ 1 ನೇ ಪ್ರತಿವಾದಿಗೆ ಸೇರಿದ್ದು ಎಂದು ಉಲ್ಲೇಖ ಇದೆ ಎಂದರೆ ಸರಿಯಲ್ಲ. ಸದರಿ 08 ಅಡಿ ರಸ್ತೆಗೆ ಸಂಬಂಧಿಸಿದಂತೆ ಪುರಸಭಾ ಆಧಿಕಾರಿಗಳು ನಮಗೆ ಮತ್ತು ಪ್ರತಿವಾದಿಗಳಿಗೆ ನೋಟೀಸ್ ನೀಡಿದ್ದರು ಎಂದರೆ ಸರಿಯಲ್ಲ. ಸದರಿ 08 ಅಡಿ ಅಗಲದ ರಸ್ತೆಯು 80 ಅಡಿ ಉದ್ದ ಇದೆ ಎಂದರೆ ಸರಿ. ಪ್ರತಿವಾದಿಗಳು ಸಾರ್ವಜನಿಕ ರಸ್ತೆಯಲ್ಲಿ ಸುಣ್ಣದ ಕಲ್ಲು ವ್ಯಾಪಾರ ಮಾಡುವ ಬಗ್ಗೆ ಸಾರ್ವಜನಿಕರು ಹಲವಾರು ದೂರುಗಳನ್ನು ಕೊಟ್ಟಿರುತ್ತಾರೆ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಾಕಾಶ ಕೋರಿದ್ದು ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**

ಅಮಲು ಜಾರಿ.ನಂ.7/2023

**<u>ಸಾಕ್ಷಿಯುನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.18.01.2024</u>**

**<u>ಪಾಟಿ ಸವಾಲುಃ ಡಿಕ್ರಿದಾರರ ಪರ ಶ್ರೀ.ಎನ್.ಆರ್.ಎಸ್ ವಕೀಲರಿಂದಃ</u>**

ನಾನು

**(ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯುದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**